V ಶ್ರೀ ಕೆ.ಬಿ. ಶಾಣಪ್ಪ (ಅಬಕಾರಿ ಮಂತ್ರಿ) ಅವರು : ಮಾನ್ಯ ಉಪಾಧ್ಯಕ್ಷರೇ 1965ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮ 71(4)ನೇ ಕಲುಮಿನ ಮೇರೆಗೆ;

1) 1965ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮ 22ನೇ ಕಲಮಿನ ಅಡಿಯಲ್ಲಿ ದಿನಾಂಕ 1-6-96ರಿಂದ ಜಾರಿಗೆ ಬರುವಂತೆ ಅಬಕಾರಿ ಕರದ ರಿಯಾಯಿತಿ ಸಂಬಂಧದಲ್ಲಿ ದಿನಾಂಕ 1-6-96 ರಂದು ಹೊರಡಿಸಲಾದ ಎಫ್ ಡಿ 5 ಪಿ ಇ ಎಸ್ 96(1)ನೇ ಕ್ರಮಾಂಕದ ಅಧಿಸೂಚನೆ;

2) 1968ನೇ ಇಸವಿಯ ಕರ್ನಾಟಕ ಅಬಕಾರಿ (ಅಬಕಾರಿ ಕರ ಮತ್ತು ಶುಲ್ಕ) ನಿಯಮಗಳ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 24-7-96 ರಂದು ಹೊರಡಿಸಲಾದ ಎಫ್ ಡಿ 5 ಪಿ ಇ ಎಸ್ 96(2)ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

VI ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಮಿನಿಸ್ಟರ್ ಇನ್ ಚಾರ್ಜ್ ಆಫ್ ಹ್ಯಾಂಡ್ಲೂಮ್ಸ್ ಅಂಡ್ ಟೆಕ್ಸ್‌ಟೈಲ್ಸ್) ಅವರು: ಮಾನ್ಯ ಉಪಾಧ್ಯಕ್ಷರೇ 1956 ಕಂಪನಿಗಳ ಕಾಯ್ದೆಯ 619 ಎ ಕಲಮಿನ ಮೇರೆಗೆ; 1995-96ನೇ ಸಾಲಿನ ಕರ್ನಾಟಕ ಮಿನಿಸ್ಟರ್ಸ್ ಅಭಿವೃದ್ಧಿ ನಿಗಮ ನಿಯಮಿತದ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು : ಎಲ್ಲಾ ಕಾಗದ ಪತ್ರಗಳೂ ಮಂಡಿಸಲ್ಪಟ್ಟಿವೆ.

ಪ್ರಕಟಣೆ

ಉಪಾಧ್ಯಕ್ಷರು : ಮಾನ್ಯ ಸಚಿವರಾದ ಶ್ರೀ ಹೆಚ್.ಡಿ. ರೇವಣ್ಣನವರು ನೀಡಿರುವ ಹಕ್ಕುಚ್ಯುತಿ ಸೂಚನೆಯನ್ನು ಪರಿಶೀಲಿಸಿದ್ದೇನೆ. ಈ ವಿಷಯವನ್ನು ಪರಿಶೀಲಿಸಿ ವರದಿ ಸಲ್ಲಿಸಲು ಹಕ್ಕುಚ್ಯುತಿ ಸಮಿತಿಗೆ ವಹಿಸುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು : ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದ್ದೇನೆ.

(ಸದನವು ರಾತ್ರಿ 9-10ಕ್ಕೆ ಅನಿರ್ದಿಷ್ಟ ಕಾಲದ ವರೆಗೆ ಮುಂದೂಡಲ್ಪಟ್ಟಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು - 560 001